(10) ವಿಷಯ: ಸುವರ್ಣ ಗ್ರಾಮ ಯೋಜನೆಯಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುದಾನ ಬಿಡುಗಡೆಯಲ್ಲಿ ಆಗಿರುವ ತಾರತಮ್ಯ ಕುರಿತು.

ಶ್ರೀ ಕೆ.ಶ್ರೀನಿವಾಸಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣ ಸಚಿವರು ಈ ವರ್ಷದಲ್ಲಿ ಸುವರ್ಣ ಗ್ರಾಮೀಣ ಯೋಜನೆಯನ್ನು ತಂದು 1 ಕೋಟಿಯಿಂದು 3 ಕೋಟಿಯವರೆಗೆ ಹಣವನ್ನು ಕೊಡುತ್ತೇವೆಂದು ಹೇಳಿದ್ದರು.

ಅಧ್ಯಕ್ಷರು:– ಹೇಳಿದಾಕ್ಷಣ ಎಲ್ಲಿ ಕೊಡುತ್ತಾರೆ?

ಶ್ರೀ ಕೆ.ಶ್ರೀನಿವಾಸಗೌಡ:– ಅವರೇ ಹೇಳಿದ್ದು. ಈಗ ಎಲ್ಲಿ ಕೊಡುತ್ತಾರೆ ಎಂದು ಹೇಳಿದರೆ ಹೇಗೆ? ನಮ್ಮ ಸರ್ಕಾರಕ್ಕೆ ಕೊಡುವುದಕ್ಕೆ ಆಗೋಲ್ಲವೆಂದು ಹೇಳಲಿ. ಆಗ inability ತೋರಿಸಿದಂತಾಗುತ್ತದೆ.

ಅಧ್ಯಕ್ಷರು:– ಎಲ್ಲ ಸರ್ಕಾರಗಳು ಹೀಗೆಯೇ ಹೇಳುವುದು. ಈ ವಿಚಾರದಲ್ಲಿ ಆ ಸರ್ಕಾರ ಈ ಸರ್ಕಾರ ಎಂದು ಹೇಳುವುದಿಲ್ಲ. ಎಲ್ಲ ಸರ್ಕಾರಗಳು ಇಂದ್ರ ಲೋಕವನ್ನೇ ಇಳಿಸುತ್ತೇವೆ ಎನ್ನುವ ರೀತಿ ಹೇಳುತ್ತವೆ. ಇಂದ್ರ ಲೋಕವೂ ಇಲ್ಲ. ಯಾವ ಲೋಕವೂ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ:– ಈಗ ಅದಕ್ಕೆ ಮಾನ್ಯ ಮಂತ್ರಿಗಳಿಗೆ ನಾನು ತಮ್ಮ ಮೂಲಕ ಏನು ಹೇಳಬಯಸುತ್ತೇನೆಂದರೆ, ನನ್ನ ಕ್ಷೇತ್ರದಲ್ಲಿ ಹೋಳೂರು ಎಂದು ಒಂದು ದೊಡ್ಡ ಹೋಬಳಿ ಹೆಡ್ ಕ್ವಾರ್ಟರ್ ಇದೆ. 3875 ಜನಸಂಖ್ಯೆ ಇದೆ. ಇವರು ಕೊಟ್ಟಿರುವ ಅನುದಾನವೆಷ್ಟೆಂದರೆ 57.80 ಲಕ್ಷ ರೂಪಾಯಿಗಳು ಮಾತ್ರ. ಇನ್ನು ಉಳಿದ ಹಣ ಎಲ್ಲಿಂದ ಬರಬೇಕೆಂದರೆ ಎಂ.ಎಲ್.ಎ., ಜಿಲ್ಲಾ ಪಂಚಾಯಿತಿ, ರಾಜ್ಯ ವಲಯ, ತಾಲ್ಲೂಕು ಪಂಚಾಯಿತಿ, ಇ.ಒ., ಎಸ್.ಜಿ.ಎಸ್.ವೈ., ನಬಾರ್ಡ್‌ನಿಂದ ಎಂದಿದ್ದಾರೆ. ಹೊಳೆ ನೀರು ಕುಡಿಯುವುದಕ್ಕೆ ದೊಣ್ಣೆ ನಾಯಕನ ಅಪ್ಪಣೆ ಎನ್ನುವಂತೆ ನಮ್ಮ ದುಡ್ಡನ್ನು ಖರ್ಚು ಮಾಡುವುದಕ್ಕೆ ನಿಮ್ಮ ಅಪ್ಪಣೆ ನಮಗೇಕೆ ಬೇಕು ಸ್ವಾಮಿ? ನೀವು ಸುವರ್ಣ ಗ್ರಾಮ ಯೋಜನೆಯಲ್ಲಿ ಏನು ಕಮಿಟ್ ಮಾಡಿಕೊಂಡಿದ್ದೀರೆಂದರೆ ಒಂದು ಕೋಟಿಯಿಂದ ಮೂರು ಕೋಟಿ

ಕೊಡುತ್ತೇವೆಂದು ಹೇಳಿದ್ದೀರಿ. ಅದರ ಪ್ರಕಾರ ಕನಿಷ್ಟ ಒಂದು ಕೋಟಿ ರೂಪಾಯಿಗಳ ಅನುದಾನವನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮಿಂದ ಆಗುವುದಿಲ್ಲ. ಸುಮ್ಮನೆ ಬೊಗಳೆ ಹೊಡೆದಿದ್ದೇವೆ ಎಂದು ನೀವು ಹೇಳಬೇಕು. ಈ ರೀತಿ ನೀವು ಮಾಡಿರುವುದು ಜನಗಳಿಗೆ ಮೋಸ ಮಾಡುವಂಥ ವ್ಯವಹಾರ. ನೀವು ಕೊಡುವುದಾಗಿದ್ದರೆ ನೇರವಾಗಿ ಕಮಿಟ್‌ಮೆಂಟ್ ಪ್ರಕಾರ ಕೊಡಬೇಕಾಗುತ್ತದೆ.

ಅಧ್ಯಕ್ಷರು:– ಒಳ್ಳೆ ತಮಾಷೆಯಲ್ಲ. ನೀವೂ ಮಂತ್ರಿಗಳಾಗಿದ್ದವರೇ ಅಲ್ಲವೇ ಇಂಥ ಎಷ್ಟೋ ಆಶ್ವಾಸನೆಗಳನ್ನು ನೀವು ಕೊಟ್ಟಿಲ್ಲವೇ?

ಶ್ರೀ ಕೆ.ಶ್ರೀನಿವಾಸಗೌಡ:– ನಾವು ಹಳ್ಳಿಗಳಿಗೆ ಹೋಗಿ ಭಾಷಣ ಮಾಡಿದ್ದೇವೆ, ಒಂದು ಕೋಟಿ ರೂಪಾಯಿಗಳನ್ನು ಅಭಿವೃದ್ಧಿಗಾಗಿ ಸರ್ಕಾರ ಕೊಡುತ್ತದೆಂದು.

ಅಧ್ಯಕ್ಷರು:– ನೀವು ಭಾಷಣ ಮಾಡುವುದು, ಆ ಜನರು ಚಪ್ಪಾಳೆ ಹೊಡೆಯುವುದು. ಇಷ್ಟೆ.

ಶ್ರೀ ಕೆ.ಶ್ರೀನಿವಾಸಗೌಡ:– ಇವರು ಹೇಳಿದಂತೆ ಹಣ ಕೊಡುವುದಕ್ಕೆ ಇವರ ಹತ್ತಿರ ದುಡ್ಡು ಇದೆಯೋ ಇಲ್ಲವೋ ಎಂಬುದನ್ನು ಹೇಳಬೇಕು.

ಅಧ್ಯಕ್ಷರು:– ಆಯಿತು. ಅವರು ಹೇಳುತ್ತಾರೆ. ಹೇಳುವುದಕ್ಕೆ ನಿಂತಿದ್ದಾರೆ.

ಶ್ರೀ ಸಿ.ಎಂ.ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಒಂದು ಸಾವಿರ ಕೋಟಿ ರೂಪಾಯಿಗಳಲ್ಲಿ ಒಂದು ಸಾವಿರ ಗ್ರಾಮಗಳನ್ನು ಗುರುತಿಸಿ ಅಭಿವೃದ್ಧಿಯನ್ನು ಮಾಡಬೇಕೆನ್ನುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಆ ಗುರಿಯನ್ನು ಗೊತ್ತುಪಡಿಸಿದಂಥ ಸಂದರ್ಭದಲ್ಲಿ ಸಹಿತ ಗ್ರಾಮೀಣ ಭಾಗದ ಜನಸಂಖ್ಯೆ ಆಧಾರದ ಮೇಲೆ ಮತ್ತು ಎಲ್ಲಾ ತಾಲ್ಲೂಕುಗಳಲ್ಲಿಯೂ ಬರತಕ್ಕಂಥ ಜನಸಂಖ್ಯೆ ಆಧಾರದ ಮೇಲೆ ಹಳ್ಳಿಗಳನ್ನು ಗುರುತಿಸಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡಿರಬೇಕಾದಂಥ ಸಂದರ್ಭದಲ್ಲಿ ತಮ್ಮ ತಾಲ್ಲೂಕಿನಲ್ಲಿ ಬಂದಿರುವಂಥ ಹಳ್ಳಿಗಳಿಗೆ ತಮ್ಮಲ್ಲಿ

ಎಷ್ಟು ಜನಸಂಖ್ಯೆಗೆ ಎಷ್ಟು ಹಣವನ್ನು ನಾವು ಕೊಟ್ಟಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವಂಥ ಕೆಲಸವನ್ನು ಮಾಡಿದ್ದೇವೆ. ಪಂಚಾಯತ್ ರಾಜ್ ಇಲಾಖೆಯಿಂದ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರ ಜೊತೆಗೆ ಇನ್ನುಳಿದ ಇಲಾಖೆಗಳಿಂದ ಕೂಡ ಅನುದಾನವನ್ನು ಪಡೆದುಕೊಂಡು ಅಭಿವೃದ್ಧಿ ಮಾಡುವುದರ ಬಗ್ಗೆ ಯೋಜನೆಯನ್ನು ಮಾಡಿ ಕ್ರಮ ಕೈಗೊಳ್ಳಬೇಕೆನ್ನುವ ಪ್ರಸ್ತಾಪಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಅದಕ್ಕೆ ಸಂಪೂರ್ಣವಾಗಿ ನನ್ಮ ಇಲಾಖೆಯಿಂದ ಬಜೆಟ್‌ನಲ್ಲಿ ಏನು ಹಣವಿದೆ ಅದರ ಜೊತೆ ಜೊತೆಯಲ್ಲಿಯೇ ವಿವಿಧ ಇಲಾಖೆಗಳಿಂದ ಹಣ ಪಡೆಯಬೇಕು ಎನ್ನುವಂಥ ವಿಚಾರ ನಮ್ಮದಾಗಿದೆ. ಇದು ಏಕಕಾಲದಲ್ಲಿ ಒಂದೇ ವರ್ಷದಲ್ಲಿ ಎಲ್ಲವೂ ಮುಗಿಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಮಾಡಿದಾಗ ಉಳಿದ ಎಲ್ಲಾ ಇಲಾಖೆಗಳಿಂದ ಹಣವನ್ನು ಕ್ರಮೇಣ ಪಡೆದು ಅದರಲ್ಲಿ ವಿಸ್ತೀರ್ಣಗೊಳಿಸಬೇಕು ಎನ್ನುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಆ ಪ್ರಕಾರ 47 ಲಕ್ಷ ರೂಪಾಯಿಗಳನ್ನು ಹಣ ವಿಂಗಡಣೆ ಮಾಡಬೇಕೆನ್ನುವಂಥ ಸಂದರ್ಭದಲ್ಲಿ ಗ್ರಾಮದ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಅವರು ಮಾಡಿದ್ದಾರೆ ಎನ್ನುವಂಥ ಭಾವನೆ ನನಗಿದೆ. ಅದನ್ನು ಎಲ್ಲಾ ಕಡೆಯಲ್ಲಿಯೂ ನಾವು ಈ ರೀತಿಯಾಗಿ ಮಾಡಿದ್ದೇವೆ.

(11) ವಿಷಯ: ಚಿಕ್ಕೋಡಿ ತಾಲ್ಲೂಕಿನಲ್ಲಿ 40 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವ ಬಗ್ಗೆ :

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:– ಮಾನ್ಯ ಅಧ್ಯಕ್ಷರೆ, ನಮ್ಮ ಚಿಕ್ಕೋಡಿ ತಾಲ್ಲೂಕಿನಲ್ಲಿ 40 ಟ್ರಾನ್ಸ್‌ಫಾರ್ಮರ್‌ಗಳು ಕಳೆದ ಒಂದು ವರ್ಷದಿಂದ ಸುಟ್ಟು ಹೋಗಿವೆ. ಇಲ್ಲಿಯವರೆಗೆ ಅವುಗಳನ್ನು ರೀಪ್ಲೇಸ್ ಮಾಡುವುದಕ್ಕೆ ಅಧಿಕಾರಿಗಳು ತಯಾರಿಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಬೆಳಗಾಂಗೆ ಬಂದಾಗ ಚಿಕ್ಕೋಡಿಯೊಳಗೆ ಮೀಟಿಂಗ್ ತೆಗೆದುಕೊಂಡಾಗ ಸಂಬಂಧಪಟ್ಟ ಅಧಿಕಾರಿಗಳು ಕೂಡ ಹೇಳಿದರು. ತಕ್ಷಣ ಸದಲಗ ಕ್ಷೇತ್ರಕ್ಕೆ 60 ಮತ್ತು 63 ಮತ್ತು 100 ಕೆ.ವಿ. ಟ್ರಾನ್ಸ್‌ಫಾರ್ಮರ್‌ಗಳನ್ನು ರೀಪ್ಲೇಸ್ ಮಾಡಬೇಕೆಂದು ಹೇಳಿದರೂ ಕೂಡ ಇದುವರೆವಿಗೂ ರೀಪ್ಲೇಸ್ ಮಾಡಿಲ್ಲ. ನಮಗೆ